ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ), ದಾವಣಗೆರೆ.

SJJES
ESTD - 1962
ಸ್ಥಾಪನೆ- 1962

# ವಿದ್ಯಾವರಣ

ವಿಶೇಷ ಪುರವಣಿ ಮಕ್ಕಳ ಮಾಸಪತ್ರಿಕೆ

ದಿನಾಂಕ : 14/08/2026 : www.sjjes.ac.in : info@sjjes.ac.in : +91.8192.277698

## ಜಿ ವಿ ಸಿ ಆಂಗ್ಲಮಾಧ್ಯಮ ಸಮೂಹ ಶಾಲೆಗಳ ವಿಭವ – ವಿಕಾಸ 2026–27



ಗುರುಬಸಮ್ಮ ವಿ. ಚಿಗಟೇರಿ ನರ್ಸರಿ, ಕಿರಿಯ ಹಿರಿಯ ಪ್ರಾಥಮಿಕ & ಪ್ರೌಢಶಾಲೆಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ 22/07/2026ರಂದು ನರಸರಾಜ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿ ಸಂಘದ ಉದ್ಘಾಟನೆ ಮತ್ತು ಪ್ರತಿಭಾ ಪುರಸ್ಕಾರ 2026–27 ನಡೆಯಿತು. ಈ ಸಂದರ್ಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ಹೆಚ್. ನಿಂಗಪ್ಪ ಮುಖ್ಯೋಪಾಧ್ಯಾಯರು ಜಿ.ವಿ.ಸಿ.ಹೆಚ್.ಎಸ್. ಇವರು ವಹಿಸಿದ್ದರು. ಕಾರ್ಯಕ್ರಮವನ್ನು ದೀಪ ಬೆಳಗುವುದರ ಮೂಲಕ ಶ್ರೀ ಡಾ. ರಾಜಕುಮಾರ್ ಡಿ.ಜಿ. ಪ್ರಾಧ್ಯಾಪಕರು ಜಿ.ಎಂ. ವಿಶ್ವವಿದ್ಯಾನಿಲಯ ದಾವಣಗೆರೆ ಇವರು ನೆರವೇರಿಸಿದರು.

ಪ್ರತಿಭಾ ಪುರಸ್ಕಾರ ಕಾರ್ಯವನ್ನು ಜಿ.ವಿ.ಸಿ.ಯ ಅಲ್ಯುಮ್ನಿಯಾದ ಶ್ರೀಮತಿ ಡಾ. ಅಮ್ರೀನ್ ತಾಜ್ ಅಸೋಸಿಯೇಟ್ ಪ್ರೋಫೆಸರ್ ಕರಾವಳಿ ತಾಂತ್ರಿಕ ಕಾಲೇಜು ಮಂಗಳೂರು ಇವರು ನೆರವೇರಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಮನೋಹರ್ ಎಸ್. ಚಿಗಟೇರಿ ಕಾರ್ಯದರ್ಶಿಗಳು ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ ಇವರು ವಹಿಸಿದ್ದರು. ಹಾಗೆಯೇ ಈ ಕಾರ್ಯಕ್ರಮದಲ್ಲಿ ಶೈಕ್ಷಣಿಕ ಸಲಹೆಗಾರರಾದ ಶ್ರೀ ಎಂ.ಟಿ. ಮಳಗಿ ಸರ್, ಶ್ರೀಮತಿ ವಾಗ್ದೇವಿ ಆರ್. ಸಹೋದರ ಶಾಲೆಗಳ ಮುಖ್ಯಸ್ಥರಾದ ಶ್ರೀಮತಿ ವೀರಮ್ಮ ಎಂ.ಎಸ್. ಶ್ರೀ ಸುರೇಶ್‌ನಾಯ್ಕ್ ಜಿ. ಶ್ರೀ ನಾಗರಾಜ್ ಎಸ್. ಇವರುಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಬಸವರಾಜ್ ಶಿಕ್ಷಕರು ನಿರೂಪಿಸಿದರು. ಸ್ವಾಗತವನ್ನು ಶ್ರೀಮತಿ ಸೌಭಾಗ್ಯ ಎನ್.ಕೆ. ಶಿಕ್ಷಕರು ಹಾಗೂ ವಂದನಾರ್ಪಣೆಯನ್ನು ದಯಾನಂದ್ ಕೆ.ವಿ. ಶಿಕ್ಷಕರು ಇವರುಗಳು ನಡೆಸಿಕೊಟ್ಟರು.

# ವಿದ್ಯಾರ್ಥಿ ಸಂಘದ ಉದ್ಘಾಟನೆ 2026 - 27



\

ದಿನಾಂಕ 23 7 2026ರಂದು ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿ ಸಂಘದ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವನ್ನು ಪ್ರಾರ್ಥನೆ ಮೂಲಕ ಕುಮಾರಿ ಮೇಘನಾ ಮತ್ತು ಸಂಗಡಿಗರು 9ನೇ ತರಗತಿ ಇವರಿಂದ ಕಾರ್ಯಕ್ರಮ ಪ್ರಾರಂಭವಾಯಿತು, ಶ್ರೀಯುತ ಬಿ.ಕೆ .ಹನುಮಂತಪ್ಪನವರು ಅತಿಥಿಗಳಿಗೆ ಸ್ವಾಗತ ಕೋರಿದರು. ಡಾಕ್ಟರ್ ಮೃತ್ಯುಂಜಯ ಎಂ ಬಿ ಬಿ ಎಸ್ ,ಎಂ ಡಿ, ನರ ಹಾಗೂ ಮಾನಸಿಕ ಆರೋಗ್ಯ ತಜ್ಞರು ಇವರು ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿ ,ಉದ್ಘಾಟಕರ ನುಡಿಗಳನ್ನು ಆಡಿದರು. ಮತ್ತೋರ್ವ ಅತಿಥಿಗಳಾದಂತ ಶ್ರೀಮತಿ ಅಶ್ವಿನಿ ಆರ್ ರಾಯ್ಕರ್, ಪ್ರಾಯೋಗಿಕ ವಿಶೇಷ ಲೋಕಾಯುಕ್ತ ಮತ್ತು ಕ್ರಿಮಿನಲ್ ಅಡ್ವೊಕೇಟ್ ರವರು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ನಡೆಸಿ ಬಹುಮಾನ ವಿತರಕರ ನುಡಿಗಳನ್ನು ಆಡಿದರು. ಮುಖ್ಯ ಅತಿಥಿಗಳಾದ

ಶ್ರೀ ಮನೋಹರ್ ಎಸ್ ಚೆಗಟೇರಿ, ಸಂಸ್ಥೆಯ ಕಾರ್ಯದರ್ಶಿಯವರು ಅತಿಥಿಗಳ ನುಡಿಗಳನ್ನು ಆಡಿದರು ಹಾಗೂ ಶ್ರೀಮತಿ ಸೌಮ್ಯ ಬಸವರಾಜ್ , ಸಹಕಾರ್ಯದರ್ಶಿಯವರು ಅತಿಥಿಗಳ ನುಡಿಗಳನ್ನು ಆಡಿದರು. ಕಾರ್ಯಕ್ರಮದಲ್ಲಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿಯಾದ ಶ್ರೀಮತಿ ವೀರಮ್ಮ ಮತ್ತು ಸಹೋದರ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ನಿಂಗಪ್ಪ ಎಚ್ ಮತ್ತು ಶ್ರೀ ನಾಗರಾಜ ಎಸ್, ಸಂಸ್ಥೆಯ ಶೈಕ್ಷಣಿಕ ಸಲಹೆಗಾರರಾದ ಶ್ರೀಮತಿ ಆರ್ ವಾಗ್ದೇವಿ ಹಾಗೂ ಶ್ರೀ ಮಳಗಿ ಎಂ ಟಿ ಉಪಸ್ಥಿತರಿದ್ದರು.

ಶ್ರೀ ಸುರೇಶ್ ನಾಯಕ್ ಜಿ ಮುಖ್ಯೋಪಾಧ್ಯಾಯರು ಇವರು ಅಧ್ಯಕ್ಷರ ನುಡಿಗಳನ್ನು ಆಡಿದರು. ಸಹ ಶಿಕ್ಷಕಿಯಾದ ಶ್ರೀಮತಿ ನಿರ್ಮಲಾರವರು ಕಾರ್ಯಕ್ರಮದಲ್ಲಿ ಸರ್ವರಿಗೂ ವಂದನೆಗಳನ್ನು ಸಲ್ಲಿಸಿದರು. ಕೊನೆಯಲ್ಲಿ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಂದ ಲಘು ಮನರಂಜನೆಯ ಕಾರ್ಯಕ್ರಮ ನಡೆಯಿತು.

# 2026–27 ನೇ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಉದ್ಘಾಟನಾ ಸಮಾರಂಭ



ದಿನಾಂಕ:24–07–2026 ರಂದು ನಮ್ಮ ಶಾಲೆಯಲ್ಲಿ 2026–27 ನೇ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ನಾಗರಾಜ ಎಸ್, ಅವರು ವಹಿಸಿಕೊಂಡಿದ್ದರು. ಉದ್ಘಾಟನೆ:ವಿದ್ಯಾರ್ಥಿ ಸಂಘದ ಉದ್ಘಾಟಕರಾಗಿ ಕು. ಚಂದರ್ ಆರ್ ಬಿ. ಇ (ಹಿರಿಯ ವಿದ್ಯಾರ್ಥಿ) ಅವರು ಭಾಗವಹಿಸಿದ್ದರು. ದೀಪ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ಆರಂಭಿಸಲಾಯಿತು ಕಾರ್ಯಕ್ರಮಕ್ಕೆ ಬಂದಂತ ಎಲ್ಲರನ್ನು ಶ್ರೀ ಜಿ.ಎಂ.ಪ್ರಭುದೇವ್ ಅವರು ಸ್ವಾಗತಿಸಿದರು. ನಂತರ ಕಾರ್ಯಕ್ರಮದಲ್ಲಿ ತನುಜ ಎಂ 10ನೇ ತರಗತಿ ವಿದ್ಯಾರ್ಥಿನಿ ವಾರ್ಷಿಕ ವರದಿಯನ್ನು ಓದುವುದರ ಮೂಲಕ ವಾರ್ಷಿಕ ಕಾರ್ಯ ಚಟುವಟಿಗಳ ವಿಷಯವನ್ನು ತಿಳಿಸಿದರು. ಉದ್ಘಾಟಕರ ಸಂದೇಶ

ಆಗಮಿಸಿ ವಿದ್ಯಾರ್ಥಿಗಳು ಯಾವ ರೀತಿಯಲ್ಲಿ ಸಾಧನೆಯನ್ನು ಮಾಡಬೇಕು, ಜೊತೆಗೆ ಗುರು– ಹಿರಿಯರಿಗೆ ಯಾವ ರೀತಿಯಲ್ಲಿ ವಿಧೇಯರಾಗಿರಬೇಕು ಎಂಬುದನ್ನು ತಿಳಿಸಿದರು. ಸತತ ಅಭ್ಯಾಸ ಹಾಗೂ ಪರಿಶ್ರಮದಿಂದ ಮಾತ್ರ ಸಾಧನೆಯ ಶಿಖರವನ್ನು ಏರಲು ಸಾಧ್ಯ. ವಿದ್ಯೆ ಎಂಬುದು ಸಾಧಕನ ಸ್ವತ್ತಾಗಬೇಕೇ ವಿನಃ ಸೋಮಾರಿಯ ಸ್ವತ್ತಾಗಬಾರದು ಎಂದು ವಿದ್ಯಾರ್ಥಿ ಜೀವನದ ಮಹತ್ವವನ್ನು ಕುರಿತು ಹೇಳಿದರು. ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರವನ್ನು ನೀಡಲು ಆಗಮಿಸಿದ್ದ ಶ್ರೀ ಗುರುಸಿದ್ದ ಸ್ವಾಮಿ (ನಿಕಟಪೂರ್ವ ಕಾರ್ಯದರ್ಶಿ, ಕೆ.ಆರ್.ವಿ.ಪಿ. ದಾವಣಗೆರೆ) ಇವರು ವಿದ್ಯಾರ್ಥಿಗಳನ್ನು ಕುರಿತು ಮಾತನಾಡುತ್ತಾ ಓದುವ ವಯಸ್ಸಿನಲ್ಲಿ ಗಮನವಿಟ್ಟು ಮಕ್ಕಳು ಅಭ್ಯಾಸ ಮಾಡಿದರೆ ಒಂದು ಉನ್ನತವಾದ ಗುರಿ ತಲುಪಲು ಸಾಧ್ಯ. ವಿದ್ಯೆಗೆ ವಿನಯವೇ ಭೂಷಣ. ವಿನಯದೊಂದಿಗಿದ್ದರೆ ವಿದ್ಯೆಯನ್ನು ಅತ್ಯುತ್ತಮ ರೀತಿಯಲ್ಲಿ ಪಡೆಯಲು ಸಾಧ್ಯ ಎಂದು ತಿಳಿಸಿ, ಪ್ರತಿಭಾ ಪುರಸ್ಕಾರವನ್ನು ಸ್ವೀಕರಿಸಲು ಬಂದ ವಿದ್ಯಾರ್ಥಿಗಳನ್ನು ಉದಾಹರಣೆಯಾಗಿ ನೀಡಿ ಹಾರೈಸಿದರು ಪ್ರೇರಣಾದಾಯಿ ನುಡಿಗಳು: ಓದುವ ವಯಸ್ಸಿನಲ್ಲಿ ಶ್ರದ್ಧೆಯಿಂದ ಓದಿದರೆ ಯಶಸ್ಸು ಸಾಧ್ಯ ಎಂದು ಹೇಳಿದರು. ಬರವಣಿಗೆಯ ಶ್ರೇಷ್ಠತೆಯನ್ನು ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು. ಮುಂದಿನ ವರ್ಷದ ಪ್ರತಿಭಾ ಪುರಸ್ಕಾರದಲ್ಲಿ ಅವರ ಒಂದು ಕೊಡುಗೆಯನ್ನು ನೀಡುತ್ತೇವೆ ಎಂದು ಹೇಳಿ ವಿದ್ಯಾರ್ಥಿಗಳಿಗೆ ಹುರಿದುಂಬಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀ ಮನೋಹರ ಎಸ್. ಚಿಗಟೇರಿ (ಕಾರ್ಯದರ್ಶಿಗಳು) ಇವರು ವಿದ್ಯಾರ್ಥಿಗಳನ್ನು ಕುರಿತು ಮಾತನಾಡುತ್ತಾ ಮಕ್ಕಳು ಸರ್ವಾಂಗೀಣ ಬೆಳವಣಿಗೆಯನ್ನು ಹೊಂದಲು ಪಠ್ಯ ಚಟುವಟಿಕೆಗಳು ಅಷ್ಟೇ ಅಲ್ಲದೆ ಪಠ್ಯೇತರ ಚಟುವಟಿಕೆಗಳು ಸಹ ನೆರವಾಗುತ್ತವೆ. ಎಲ್ಲಾ ವಿದ್ಯಾರ್ಥಿಗಳು ಅವುಗಳನ್ನು ಮೈಗೂಡಿಸಿಕೊಂಡು ಅತಿ ಹೆಚ್ಚಿನ ಅಂಕ ಪಡೆಯಲು ನಿಮ್ಮ ಓದು, ಬರಹ, ಶಿಸ್ತು ಅಷ್ಟೇ ಕಾರಣ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ನಮ್ಮ ಶಾಲೆಯ ಶೈಕ್ಷಣಿಕ ಸಲಹೆಗಾರರಾದ ಆರ್ ವಾಗ್ದೇವಿ ಮೇಡಂ ಮತ್ತು ಅಕ್ಕಮಹಾದೇವಿ ಶಾಲೆಯ ಶೈಕ್ಷಣಿಕ ಸಲಹೆಗಾರರಾದ ಎಂ.ಟಿ.ಮಳಿಗಿ ಸರ್ ಇವರು ಉಪಸ್ಥಿತರಿದ್ದು, ಶುಭ ನುಡಿಗಳನ್ನು ಆಡಿದರು.ಕಾರ್ಯಕ್ರಮದಲ್ಲಿ S. V. M C ಶಾಲೆಯ ಮುಖ್ಯೋಪಾಧ್ಯಾಯಿನಿ ಶೈಲಜಾ ಮೇಡಂ ಹಾಗೂ ಶ್ರೀ ಗುರುಬಸಮ್ಮ V. ಚಿಗಟೇರಿ ಶಾಲೆಯ ಮುಖ್ಯೋಪಾಧ್ಯಾಯಿನಿ ವೀರಮ್ಮ ಮೇಡಂ ಇವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ 2025–26 ನೇ ಸಾಲಿನಲ್ಲಿ 10 ನೇ ತರಗತಿಯಲ್ಲಿ ಅತಿ ಹೆಚ್ಚಿನ ಅಂಕ ಪಡೆದ 3 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು

ಮಾಡಲಾಯಿತು.ಸನ್ಮಾನಿತ ವಿದ್ಯಾರ್ಥಿಗಳು:ಅಪೇಕ್ಷಾ ಎಂ ಶೇಟ್, ಪ್ರೀತಂ ಪಿ. ಕು॥ಅಂಕಿತಾ ಎನ್ ಹುಗ್ಗಿ ಈ ವಿದ್ಯಾರ್ಥಿಗಳಿಗೆ ನಗದು ಬಹುಮಾನ (₹1000) ಮತ್ತು ಪ್ರಮಾಣ ಪತ್ರವನ್ನು ನೀಡಿ ಗೌರವಿಸಲಾಯಿತು.7 ನೇ ತರಗತಿಯ ಸಾಧಕರಿಗೆ ಸನ್ಮಾನ:ಅಂತೆಯೇ, S. V. M. C. ಶಾಲೆಯ 7 ನೇ ತರಗತಿಯ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ಶಾಂತಮ್ಮ ಪರಡಿಮಠ ಮತ್ತು ಅವರು ನಡೆಸಿಕೊಟ್ಟರು.ಸಾಂಸ್ಕೃತಿಕ ಕಾರ್ಯಕ್ರಮಗಳು:ಕಾರ್ಯಕ್ರಮದಲ್ಲಿ S. V. M. C. ಶಾಲೆಯ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡಲಾಯಿತು.ಈ ಕಾರ್ಯಕ್ರಮದಲ್ಲಿ ನರ್ಸರಿ ಹಿರಿಯ ಪ್ರಾಥಮಿಕ ಶಾಲೆಯ ಎಲ್ಲಾ ಶಿಕ್ಷಕರು ಮತ್ತು S. J. J. M. ಪ್ರೌಢಶಾಲೆಯ ಎಲ್ಲಾ ಶಿಕ್ಷಕರು & ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

## ಕುಮಾರಿ ಧನುಶ್ರೀಗೆ ಕನ್ನಡ ಕುವರಿ ಪ್ರಶಸ್ತಿ ೨೦೨೬




ಗುರುಬಸಮ್ಮ ವಿ. ಚಿಗಟೇರಿ ಪ್ರೌಢಶಾಲೆಯ ಆಂಗ್ಲಮಾಧ್ಯಮದ ಧನುಶ್ರೀ ಕಳೆದ ೨೦೨೫-೨೬ನೇ ಸಾಲಿನಲ್ಲಿ ಕನ್ನಡ ವಿಷಯದಲ್ಲಿ ೧೨೫ಕ್ಕೆ ೧೨೨ ಅಂಕಗಳನ್ನು ಪಡೆಯುವ ಮೂಲಕ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ನೀಡುವ ಕನ್ನಡ ಕುವರ ಕುವರಿ ಪ್ರಶಸ್ತಿ ಲಭಿಸಿದೆ. ಇವರಿಗೆ ಶಾಲಾ ಆಢಳಿತ ಮಂಡಳಿಯವರು, ಶೈಕ್ಷಣಿಕ ಸಲಹೆಗಾರರು, ಶಾಲಾ ಮುಖ್ಯಸ್ಥರು ಹಾಗೂ ಬೋಧಕ ಬೋಧಕೇತರ ವರ್ಗದವರು ಕುಮಾರಿ ಧನುಶ್ರೀಗೆ ಶುಭ ಹಾರೈಸಿದ್ದಾರೆ.

# ಸ್ನೇಹ ದಿನಾಚರಣೆ



ಸ್ನೇಹವು ಜೀವನ ಅತ್ಯಮೂಲ್ಯವಾದ ಉಡುಗೊರೆ ನಿಜವಾದ ಸ್ನೇಹಿತರು ಎಂದಿಗೂ ನಮ್ಮನ್ನು ಕೈ ಬಿಡುವುದಿಲ್ಲ. ಸಂತೋಷದಲ್ಲೂ ದುಃಖದಲ್ಲೂ ಜೊತೆ ನಿಲ್ಲುವವರೇ ಸ್ನೇಹಿತರು ನಂಬಿಕೆ ಮತ್ತು ಪ್ರೀತಿ ಮುಖ್ಯವಾಗಿರುತ್ತದೆ. ಸ್ನೇಹಿತರು ಜೀವನಕ್ಕೆ ಹೊಸ ಉತ್ಸಾಹವನ್ನು ನೀಡುತ್ತೃಎ. ಒಳ್ಳೆಯ ಸ್ನೇಹ ಜೀವನವನ್ನು ಸುಂದರವಾಗಿಸುತ್ತದೆ. ಸ್ನೇಹಕ್ಕೆ ಹಣ ಅಥವಾ ಸ್ಥಾನಮಾನ ಮುಖ್ಯವಲ್ಲ ಒಳ್ಳೆಯ ಮನಸ್ಸು ಇದ್ದರೆ ಸಾಕು. ಸ್ನೇಹ ಶಾಶ್ವತವಾಗಿರುತ್ತದೆ. ಸ್ನೇಹವು  ಪರಸ್ಪರ ಗೌರವ ಮತ್ತು ವಿಶ್ವಾಸದ ಮೇಲೆ ನಿಂತಿದೆ. ನಿಜವಾದ ಸ್ನೇಹಿರು ತಪ್ಪು ಮಾಡಿದಾಗ ತಿದ್ದಿ ಹೇಳುತ್ತಾನೆ. ಸ್ನೇಹ ಜೀವನ ಕಷ್ಟಗಳನ್ನು ಸುಲಭವಾಗಿಸುತ್ತದೆ. ಒಳ್ಳೆಯ ಸ್ನೇಹಿತು ನಮ್ಮ ದೊಡ್ಡ ಶಕ್ತಿಯಾಗುತ್ತಾರೆ. ಸ್ನೇಹದ ಬಂಧವನ್ನು ಸದಾ ಕಾಪಾಡಿಕೊಳ್ಳಬೇಕು. ನನ್ನ ಸ್ನೇಹಿತು ನನ್ನ ಜೀವನದ ದೊಡ್ಡ ಭಾಗ್ಯ. ಸ್ನೇಹವು ಎಂದಿಗೂ ಮರೆಯಲಾಗದ ಅಮೂಲ್ಯ ನೆನಪುಗಳನ್ನು ನೀಡುತ್ತದೆ. ನಿಜವಾದ ಸ್ನೇಹ ಶಾಶ್ವತವಾಗಿ ಹೃದಯದಲ್ಲಿ ಉಳಿಯುತ್ತದೆ. ಆದರೆ ಸ್ನೇಹಿತು ನಮ್ಮ ನೆನಪುಗಳನ್ನು ಮಧುರವಾಗಿಸುತ್ತೇ. ಸ್ನೇಹದಿಂದ ಜೀವನದಲ್ಲಿ ಆತ್ಮ ವಿಶ್ವಾಸ ಹೆಚ್ಚುತ್ತದೆ. ನಿಜವಾದ ಸ್ನೇಹಿತ ಎಂದಿಗೂ ಮೋಸ ಮಾಡುವುದಿಲ್ಲ ಸ್ನೇಹಿತರು ನಮ್ಮ ಒಳ್ಳೆಯ ಸ್ನೇಹ ಜೀವನವನ್ನು ಅರ್ಥ ಪೂರ್ಣವಾಗಿಸುತ್ತಾರೆ. ಸ್ನೇಹವು ಹೃದಯಗಳನ್ನು ಒಂದಾಗಿಸುವ ಬಾಂಧವಯ ಪ್ರತಿಯೊಬ್ಬರೂ ಒಳ್ಳೆಯ ಸ್ನೇಹಿತರನ್ನು ಗೌರವಿಸಬೇಕು ನಿಜವಾದ ಸ್ನೇಹವು ಜೀವನ ಪೂರ್ತಿ ಉಳಿಯುವ ಅಮೂಲ್ಯ ಬಂಧವಾಗಿದೆ. ಎಲ್ಲರಿಗೂ ಸ್ನೇಹಿತರ ದಿನಾಚರಣೆಯ ಶುಭಾಶಯಗಳು.

**ಕಾವೇರಿ ಆರ್. (೬ನೇ ತರಗತಿ)**

**ಜಿ.ವಿ.ಸಿ.ಹೆಚ್.ಪಿ.ಎಸ್. (ಆ.ಮಾ.)**

# ಗುರುವಿಗೊಂದು ನಮನ



ಗುರು ಎಂದರೆ ದಾರಿ ತೋರುವ ದೇವರು
ಎಲ್ಲಿ ಮಗುವಿನ ಕೈ ಹಿಡಿದು ನಡೆಸುವ ಪೋಷಕರು
ವಿದ್ಯಾರ್ಥಿಗಳು ಕನಸಿಗೆ ಬಣ್ಣ ತುಂಬುವ ಸ್ನೇಹಿತರು
ಸದಾ ಹೂವಿನಂತೆ ನಗುವ ಮಕ್ಕಳಗೆ ಪಾಠ ಮಾಡುವರು
ಮಕ್ಕಳಗೆ ಬಾಳನ ಸ್ಪೂರ್ತಿಯಾಗಿ ಮಿನುಗುವ ತಾರೆಯಾಗಿ ಮಕ್ಕಳ
ಸಾಧನೆಯ ಹಿಂದೆ ಬಹು ಮುಖ್ಯ ಪಾತ್ರ ವಹಿಸಿದವರು ಈ ದೇವರು

**ಸೂಫಿಯಾ ಬಾನು (೭ನೇ ತರಗತಿ)**

**ಜಿ.ವಿ.ಸಿ.ಹೆಚ್.ಪಿ.ಎಸ್. (ಕ.ಮಾ.)**

# ಪ್ರತಿಭಾ ಪುರಸ್ಕಾರ ಸಮಾರಂಭ



ದಿನಾಂಕ 12-07-2026 ರಂದು ನಡೆದ ಅಜ್ಜಂಪುರ ಶೆಟ್ರು ಪ್ರತಿಭಾ ಪ್ರತಿಷ್ಠಾನದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ, ನಮ್ಮ ಶಾಲೆಯ 2025-26 ನೇ ಸಾಲಿನ 10 ನೇ ತರಗತಿಯಲ್ಲಿ ಅತಿ ಹೆಚ್ಚಿನ ಅಂಕ ಪಡೆದ ಅಪೇಕ್ಷಾ ಎಂ.ಶೇಟ್ ಎಂಬ ವಿದ್ಯಾರ್ಥಿನಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. 10 ನೇ ತರಗತಿಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಈ ವಿದ್ಯಾರ್ಥಿನಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ ಅಭಿನಂದಿಸಲಾಯಿತು. ಶಾಲೆಯ ಎಲ್ಲಾ ಶಿಕ್ಷಕರು ಮತ್ತು ಆಡಳಿತ ಮಂಡಳಿಯವರು ಈ ವಿದ್ಯಾರ್ಥಿನಿಗೆ ತುಂಬು ಹೃದಯದ ಅಭಿನಂದನೆಗಳು ಮತ್ತು ಶುಭಾಶಯಗಳನ್ನು ತಿಳಿಸಿದರು.

# ಭಕ್ತಿಗೀತೆ ಗಾಯನ ಸ್ಪರ್ಧೆ



ದಿನಾಂಕ 14-07- 2026 ರಂದು ಡಾ. ಪಂಡಿತ ಪುಟ್ಟರಾಜ ಗವಾಯಿ (ರಿ) ದಾವಣಗೆರೆ ಜಿಲ್ಲಾ ಮಹಿಳಾ ವೇದಿಕೆ, ದಾವಣಗೆರೆ ಇವರು ನಡೆಸಿದ ಭಕ್ತಿಗೀತೆ ಗಾಯನ ಸ್ಪರ್ಧೆಯಲ್ಲಿ ನಮ್ಮ ಶಾಲೆಯ 8, 9 ಮತ್ತು 10 ನೇ ತರಗತಿಯ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.ಈ ಸ್ಪರ್ಧೆಯಲ್ಲಿ ಎಂಟನೇ ತರಗತಿಯ ವಿದ್ಯಾರ್ಥಿನಿಯರು ತೃತೀಯ ಸ್ಥಾನವನ್ನು ಪಡೆದು ಬಹುಮಾನವನ್ನು ತಮ್ಮದಾಗಿಸಿಕೊಂಡಿರುತ್ತಾರೆ.

# ಕಲಾ ರಚನೆ (Geometrical Art)






'ಕಸದಿಂದ ರಸ' ಎನ್ನುವ ಮಾತನ್ನು ನಮ್ಮ ಶಾಲೆಯ 9ನೇ ತರಗತಿಯ ಮಕ್ಕಳು ನಿಜವಾಗಿಸಿದ್ದಾರೆ. ತಮ್ಮ ತರಗತಿ ಕೋಣೆಯನ್ನು ಸುಂದರವಾಗಿಟ್ಟುಕೊಳ್ಳಬೇಕು ಎನ್ನುವ ವಿಚಾರದೊಂದಿಗೆ, ತಮ್ಮ ತರಗತಿಯ ಶಿಕ್ಷಕಿಯರಾದ ಶ್ರೀಮತಿ ಶ್ವೇತ ಎಚ್ ಇವರ ಮಾರ್ಗದರ್ಶನದಲ್ಲಿ ಹಳೆಯ ನ್ಯೂಸ್‌ಪೇಪರ್‌ಗಳನ್ನು (Newspaper) ಬಳಸಿ Geometrical art ರಚನೆಯನ್ನು ತುಂಬಾ ಸುಂದರವಾಗಿ ಮಾಡಿದ್ದಾರೆ. ಮತ್ತು ಕಾರ್ಗಿಲ್ ವಿಜಯೋತ್ಸವದ ಬಗ್ಗೆ ಚಿತ್ರ ರಚನೆ ಮಾಡಿದ್ದಾರೆ.

# ಪ್ರತಿಭಾ ಶೋಧಕ ಆಯ್ಕೆ ಪರೀಕ್ಷೆ ಮತ್ತು ಸನ್ಮಾನ



ದಿನಾಂಕ:23–07–2026 ರಂದು ರಾಜಲಕ್ಷ್ಮಿ ಚಿಲ್ಡ್ರನ್ ಫೌಂಡೇಶನ್(ಲಾಭರಹಿತ ಸಂಸ್ಥೆ)ಬೆಳಗಾವಿ ವತಿಯಿಂದ ಗ್ರಾಮೀಣ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಉಚಿತ ಶಿಕ್ಷಣ ಮತ್ತು ತರಬೇತಿಗೆ ಆಯ್ಕೆ ಮಾಡಿದೆ. NMMS ಪರೀಕ್ಷೆಗೆ ಹಾಜರಾದ ಬ್ಲಾಕ್ ವಾರು ಸೇ.6ರಷ್ಟು ವಿದ್ಯಾರ್ಥಿಗಳನ್ನು ಶಾರ್ಟಲಿಸ್ಟ್ ಮಾಡಿ, ಅವರಿಗೆ 'ಪ್ರತಿಭಾ ಪೋಷಕ್' ಆಯ್ಕೆ ಪರೀಕ್ಷೆ ನಡೆಸಲಾಯಿತು.

ಆಯ್ಕೆಯಾದ ವಿದ್ಯಾರ್ಥಿಗಳಿಗೆ 2 ವರ್ಷಗಳ ಕಾಲ ಸಂಪೂರ್ಣ ಉಚಿತವಾಗಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತದೆ. ಡಿಜಿಟಲ್ ಕಲಿಕೆಗೆ ನೆರವಾಗಲು ಉಚಿತ Android Tablet ಮತ್ತು ಉತ್ತಮ ಗುಣಮಟ್ಟದ ಬ್ಯಾಗ್ ನೀಡಲಾಗಿದೆ. ಈ ಪ್ರತಿಭಾ ಶೋಧಕ ಆಯ್ಕೆ ಪರೀಕ್ಷೆಯಲ್ಲಿ ನಮ್ಮ ಶಾಲೆಯ 9 ನೇ ತರಗತಿಯ ವಿದ್ಯಾರ್ಥಿನಿ ಕುಮಾರಿ ಶ್ವೇತಾ ಇವರು ಉತ್ತೀರ್ಣರಾಗಿ ಆಯ್ಕೆಯಾಗಿದ್ದಾರೆ.ಈ ಹಿನ್ನೆಲೆಯಲ್ಲಿ, ದಿನಾಂಕ 23–07–2026 ರಂದು ಶಾಲೆಯಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಈ ವಿದ್ಯಾರ್ಥಿನಿಗೆ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಮನೋಹರ ಎಸ್ ಚಿಗಟೇರಿ ಯವರು, ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದದವರು ಅಭಿನಂದಿಸಿದರು.

# ಕನ್ನಡ ಕುವರ / ಕುವರಿ ಪ್ರಶಸ್ತಿ ಪ್ರದಾನ





ದಿನಾಂಕ:25-07-2026 ರಂದು ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ದಾವಣಗೆರೆ ಇವರ ವತಿಯಿಂದ, 2025-26 ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ SSLC ಪರೀಕ್ಷೆಯ ಕನ್ನಡ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಕನ್ನಡ ಕುವರ / ಕುವರಿ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಮಾರಂಭದಲ್ಲಿ ನಮ್ಮ ಶಾಲೆಯ ಅಂಕಿತಾ ಎನ್ ಹುಗ್ಗಿ ಮತ್ತು ಯಶೋಧರ ಎಂಬ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ನೀಡಿ ಗೌರವಿಸಲಾಯಿತು.

# ಗುರುಪೂರ್ಣಿಮೆ



ಗುರು ಬ್ರಹ್ಮಃ ಗುರು ವಿಷ್ಣುಃ
ಗುರು ದೇವೋ ಮಹೇಶ್ವರಃ
ಗುರು ಸಾಕ್ಷಾತ್ ಪರಬ್ರಹ್ಮ
ತಸ್ಮೈ ಶ್ರೀ ಗುರವೇ ನಮಃ ||

ಕಾರ್ಯಕ್ರಮದ ವಿವರ: ದಿನಾಂಕ: 29-07-2026 ವಿವರ:ದಿನಾಂಕ 29-07-2026 ರಂದು ನಮ್ಮ ಶಾಲೆಯಲ್ಲಿ ಗುರುಪೂರ್ಣಿಮೆಯನ್ನು ಸಡಗರದಿಂದ ಆಚರಿಸಲಾಯಿತು. ಈ ಸುಸಂದರ್ಭದಲ್ಲಿ ನಮ್ಮ ಶಾಲೆಯ 9 ನೇ ತರಗತಿಯ ವಿದ್ಯಾರ್ಥಿಗಳು ಎಲ್ಲಾ ಶಿಕ್ಷಕರಿಗೂ ಒಂದು ನೆನಪಿನ ಕಾಣಿಕೆ/ಉಡುಗೊರೆಯನ್ನು ನೀಡಿ, ತಮ್ಮ ಶ್ರದ್ಧಾಪೂರ್ವಕ ಶುಭ ವಂದನೆಗಳನ್ನು ಸಲ್ಲಿಸಿದರು.ಗುರುಗಳ ಮಹತ್ವ ಮತ್ತು ಸಂದೇಶ ಅಜ್ಞಾನದ ಕತ್ತಲೆಯಿಂದ ಜ್ಞಾನದ ಬೆಳಕಿನತ್ತ ನಮ್ಮನ್ನು ನಡೆಸುವವರು ಗುರುಗಳು. ಅವರು ಕೇವಲ ಪಾಠವನ್ನಷ್ಟೇ ಅಲ್ಲದೆ, ಉತ್ತಮ ವ್ಯಕ್ತಿತ್ವ, ಶಿಸ್ತು, ಪ್ರಾಮಾಣಿಕತೆ ಹಾಗೂ ಮಾನವೀಯ ಮೌಲ್ಯಗಳನ್ನು ಸಹ ನಮಗೆ ಕಲ್ಪಿಸಿಕೊಡುತ್ತಾರೆ. ಮೊದಲ ಗುರು: ನಮ್ಮ ಪ್ರಥಮ ಗುರುಗಳು ನಮ್ಮ ತಾಯಿ- ತಂದೆಯರು. ಮಾರ್ಗದರ್ಶಕರು: ತಂದೆ-ತಾಯಿಯ ನಂತರ ಶಾಲೆಯ ಶಿಕ್ಷಕರು ಸರಿದಾರಿ ತೋರಿಸುವ ಮಾರ್ಗದರ್ಶಕರು. ನಮ್ಮ ಜೀವನದಲ್ಲಿ ಗುರುಗಳ ಪಾತ್ರ ಹಿರಿದಾದುದು. ಅವರ ಪ್ರೀತಿ, ತ್ಯಾಗ ಮತ್ತು ಮಾರ್ಗದರ್ಶನದಿಂದಲೇ ನಾವೆಲ್ಲರೂ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಲು ಸಾಧ್ಯವಾಗುತ್ತದೆ

# ಜಯಕಿರಣ ಹೊಂಗಿರಣ ಕಾರ್ಯಕ್ರಮ



ಶ್ರೀವೀರಭದ್ರಪ್ಪ ಎಂ ಚೆಗಟೇರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಂದ ದಿನಾಂಕ 24/07/2026 ರಂದು ನಡೆದ ಜಯ ಕಿರಣ ಹೊಂಗಿರಣ ಕ್ರೀಡಾ ಮತ್ತು ಸಾಂಸ್ಕೃತಿಕ ವೇದಿಕೆಯ ಉದ್ಘಾಟನಾ ಸಮಾರಂಭದ ಶುಭದಿನದಂದು ಸಾಮೂಹಿಕ ನೃತ್ಯ ಹಾಗೂ ಭರತನಾಟ್ಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಹಾಗೂ ಈ ಉದ್ಘಾಟನಾ ಸಮಾರಂಭದ ನರ್ಸರಿ ಹಾಗೂ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಎಂ ಗುರುಸಿದ್ಧ ಸ್ವಾಮಿ ಇವರು ಪ್ರತಿಭಾ ಪುರಸ್ಕಾರ ಮಾಡಿ ವಿದ್ಯಾರ್ಥಿಗಳಿಗೆ ಶುಭ ಕೋರಿದರು ಮುಖ್ಯ ಅತಿಥಿಗಳಾಗಿ ಆಗಮಿಸಿದ ಹಿರಿಯ ವಿದ್ಯಾರ್ಥಿ ಚಂದರ್, ಕಾರ್ಯದರ್ಶಿಯವರಾದ ಶ್ರೀ ಮನೋಹರ್ ಎಸ್ ಚೆಗಟೇರಿಯವರು ಹಾಗೂ ಶೈಕ್ಷಣಿಕ ಸಲಹೆಗಾರರಾದ ಶ್ರೀಮತಿ ಆರ್ ವಾಗ್ದೇವಿ ಮೇಡಂ ರವರು ಹಾಗೂ ಎರಡು ಶಾಲೆಯ ಮುಖ್ಯೋಪಾಧ್ಯಾಯರು ವಿದ್ಯಾರ್ಥಿಗಳಿಗೆ ಶುಭ ಕೋರಿದರು

ಮುಖ್ಯೋಪಾಧ್ಯಾಯನಿ
ಎಸ್ ವಿ ಎಂ ಸಿ ಎಚ್ ಪಿ ಎಸ್

## ಅಡುಗೆಮನೆ ಒಂದು ಸಂಪೂರ್ಣ ವಿಶ್ವವಿದ್ಯಾಲಯ.



ಯಾರಾದ್ರೂ ನಿಜವಾಗ್ಲೂ ಮಹಿಳೆಯರ ಬುದ್ಧಿವಂತಿಕೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದಾರಾ? ನಾವು ಸಾಮಾನ್ಯವಾಗಿ ಬುದ್ಧಿವಂತಿಕೆಯನ್ನು ಡಿಗ್ರಿಗಳು, ಉದ್ಯೋಗಗಳು, ಅಥವಾ ಸ್ಥಾನಮಾನಗಳಿಂದ ಅಳೆಯುತ್ತೇವೆ... ಆದರೆ ಪ್ರತಿ ಭಾರತೀಯ ಮನೆಯಲ್ಲೂ ಬೆಳಿಗ್ಗೆಯಿಂದ ರಾತ್ರಿಯವರೆಗೆ ಜೀವಂತವಾಗಿರುವ ಅಡುಗೆಮನೆ - ಒಂದು ರೋಮಾಂಚಕ ಪ್ರಯೋಗಾಲಯ. ಇಲ್ಲಿ ಪ್ರತಿದಿನ ಅಸಾಧಾರಣ ಬುದ್ಧಿವಂತಿಕೆ ಹುಟ್ಟುತ್ತದೆ... ಮತ್ತು ಒಂದು ಡಿಗ್ರಿ ಇಲ್ಲದೆ.

ಅಡುಗೆಮನೆ ಕೇವಲ ಅಡುಗೆ ಮಾಡುವ ಜಾಗವಲ್ಲ ಅದು ಒಂದು ಸಂಪೂರ್ಣ ವಿಶ್ವವಿದ್ಯಾಲಯ.

**ಗಣಿತ_**

- ಎಷ್ಟು ಜನರಿಗೆ ಎಷ್ಟು ಹಿಟ್ಟು?
- ಉಪ್ಪು, ಮೆಣಸು, ಮಸಾಲೆಗಳ ನಿಖರ ಪ್ರಮಾಣ
- ಉಳಿದ ಆಹಾರವನ್ನು ಮರುದಿನ ಹೊಸ ತಿನಿಸಾಗಿ ಪರಿವರ್ತಿಸುವುದು

ಇದೆಲ್ಲವೂ ಪೆನ್-ಪೇಪರ್ ಇಲ್ಲದೆ... ಕೇವಲ ಅನುಭವ ಮತ್ತು ಅಂತಃಪ್ರಜ್ಞೆಯಿಂದ.

**ಭೌತಶಾಸ್ತ್ರ_**

- ಗ್ಯಾಸ್ ಉರಿಯ ಜ್ವಾಲೆ ಅಡ್ಜಸ್ಟ್ ಮಾಡುವುದು
- ಎಣ್ಣೆಯ ಸರಿಯಾದ ತಾಪಮಾನ ಅಂದಾಜಿಸುವುದು
- ಕುಕ್ಕರ್‌ನ ಸೀಟಿ ಹೊಡೆಯುವ ನಿಖರ ಸಮಯ ತಿಳಿಯುವುದು

ಇದು ತಾಪಮಾನ, ಒತ್ತಡ ಮತ್ತು ಶಕ್ತಿಯ ನಿಖರ ವಿಜ್ಞಾನ .

**ರಸಾಯನಶಾಸ್ತ್ರ_**

- ಮಸಾಲೆಗಳ ಸಮತೋಲನ
- ಸಾರಿನ ಸರಿಯಾದ ದಪ್ಪ
- ಹಾಲು ಒಡೆಯದಂತೆ ನೋಡಿಕೊಳ್ಳುವುದು
- ಹಿಟ್ಟನ್ನು ಮೃದುವಾಗಿಡುವುದು

ಪ್ರತಿ ತಿನಿಸು ಒಂದು ರಾಸಾಯನಿಕ ಪ್ರಯೋಗಕ್ಕಿಂತ ಕಡಿಮೆ ಇಲ್ಲ.

**ನಿರ್ವಹಣೆ**

- ಒಂದೇ ಸಮಯದಲ್ಲಿ 3-4 ತಿನಿಸು ತಯಾರಿಸುವುದು
- ಎಲ್ಲರಿಗೂ ಸರಿಯಾದ ಸಮಯಕ್ಕೆ ಬಡಿಸುವುದು
- ಕಡಿಮೆ ಸಮಯದಲ್ಲಿ ಹೆಚ್ಚು ಕೆಲಸ ಮಾಡುವುದು

ಇದು ದೊಡ್ಡ ಕಂಪನಿ ನಡೆಸುವುದಕ್ಕಿಂತ ಕಡಿಮೆ ಇಲ್ಲ .

**ವೀಕ್ಷಣಾ ಕೌಶಲ್ಯ**

- ಸಾರು ಬೆಂದಿದೆಯೋ ಇಲ್ಲವೋ
- ತರಕಾರಿಯಲ್ಲಿ ನೀರು ಕಡಿಮೆಯೋ ಹೆಚ್ಚೋ
- ರೊಟ್ಟಿ ತಿರುಗಿಸುವ ಸಮಯ ಯಾವಾಗ

ಇದು ತೀಕ್ಷ್ಣ ವೀಕ್ಷಣೆಯ ಪರಮ ಕಲೆ.

**ಬಹುಕಾರ್ಯ ನಿರ್ವಹಣೆ**

- ಚಹಾ ಕುದಿಯುತ್ತಿದೆ
- ಕುಕ್ಕರ್ ಸೀಟಿ ಹೊಡೆಯುತ್ತಿದೆ

- ಮಗುವಿಗೆ ಟಿಫಿನ್ ಬೇಕು

- ಫೋನ್ ರಿಂಗ್ ಆಗುತ್ತಿದೆ

ಆದರೂ ಎಲ್ಲವೂ ಗಾಬರಿ ಇಲ್ಲದೆ ವ್ಯವಸ್ಥಿತವಾಗಿರುತ್ತದೆ.

**ಆರ್ಥಿಕತೆ**

- ಸೀಮಿತ ಬಜೆಟ್‌ನಲ್ಲಿ ಇಡೀ ಕುಟುಂಬಕ್ಕೆ ಊಟ ಹಾಕುವುದು

- ಉಳಿದ ಆಹಾರವನ್ನು ಅತ್ಯುತ್ತಮವಾಗಿ ಬಳಸಿಕೊಳ್ಳುವುದು

- ಕಾಲೋಚಿತ ಪದಾರ್ಥಗಳನ್ನು ಬುದ್ಧಿವಂತಿಕೆಯಿಂದ ಬಳಸುವುದು

ಇದು ಮನೆಯ ಆರ್ಥಿಕ ನೀತಿ.

**ಮನೋವಿಜ್ಞಾನ**

- ಪ್ರತಿಯೊಬ್ಬರಿಗೆ ಏನು ಇಷ್ಟ ಎಂದು ತಿಳಿಯುವುದು

- ಇಂದಿನ ಮೂಡ್ ಅಂದಾಜಿಸುವುದು

- ಯಾರಿಗೆ ಅಸ್ವಸ್ಥತೆ, ಯಾರಿಗೆ ಹಗುರ ಆಹಾರ ಬೇಕು

ಅಡುಗೆಮನೆ ನಡೆಸುವ ಮಹಿಳೆ ಕೇವಲ ಅಡುಗೆ ಮಾಡುವುದಿಲ್ಲ...

ಇಡೀ ಕುಟುಂಬದ ಭಾವನೆಗಳನ್ನು ಪೋಷಿಸುತ್ತಾಳೆ.

**ಅಡುಗೆ ಕೇವಲ ಒಂದು ಕೌಶಲ್ಯವಲ್ಲ**

ಇದು ಪ್ರೀತಿ, ಜವಾಬ್ದಾರಿ ಮತ್ತು ತ್ಯಾಗದ ಸುಂದರ ಮಿಶ್ರಣ. ಡಿಗ್ರಿ ಇಲ್ಲದೆ, ಇಂಗ್ಲಿಷ್ ಗೊತ್ತಿಲ್ಲದೆ, ಯಾವುದೇ ಔಪಚಾರಿಕ ತರಬೇತಿ ಇಲ್ಲದೆ... ಅಡುಗೆಮನೆ ನಡೆಸುವ ಮಹಿಳೆ ಯಾವುದೇ ತರಬೇತಿ ಪಡೆದ ಮ್ಯಾನೇಜರ್‌ಗಿಂತ ಕಡಿಮೆ ಇಲ್ಲ... ಹಲವುವೇಳೆ ಅವಳೇ ಹೆಚ್ಚು ಸಮರ್ಥಳು .ದಿನಕ್ಕೆ ಮೂರು ಬಾರಿ ತಾಜಾ, ಬಿಸಿ, ರುಚಿಕರ ಆಹಾರ ಸಿಗುವುದು ಕೇವಲ "ಊಟ" ಅಲ್ಲ...

ಅದು ಮನೆಯಲ್ಲಿ ಸಿಗುವ ದೇವರ ಪ್ರಸಾದ.

ಹಾಗಾಗಿ..._

ಊಟ ಮಾಡುವ ಮುನ್ನ ಒಂದು ಕ್ಷಣ ನಿಲ್ಲಿರಿ

ಮತ್ತು ಮನಃಪೂರ್ವಕವಾಗಿ ಧನ್ಯವಾದ ಹೇಳಿರಿ

ಆ ತಾಯಿಗೆ, ಹೆಂಡತಿಗೆ, ಅಕ್ಕ/ತಂಗಿಗೆ, ಅಥವಾ ಮಗಳಿಗೆ

ಯಾರು ತನ್ನ ಪ್ರೀತಿಯಿಂದ ಪ್ರತಿದಿನ

ಒಂದು ಮನೆಯನ್ನು ಮನೆಮಾಡುತ್ತಾಳೋ

ಯಾಕೆಂದರೆ -

ಅಡುಗೆಮನೆಯ ಈ ಬುದ್ಧಿವಂತಿಕೆ,

ಈ ತಾಳ್ಮೆ ಮತ್ತು ಪ್ರೀತಿಯ ಶಕ್ತಿ...

ಯಾವುದೇ ಪುಸ್ತಕ, ಡಿಗ್ರಿ, ಅಥವಾ ಪರೀಕ್ಷೆಯಲ್ಲಿ ಕಲಿಸಲು ಸಾಧ್ಯವಿಲ್ಲಾ .

ಇದು ಅನುಭವ, ಸಮರ್ಪಣೆ ಮತ್ತು ಪ್ರೀತಿಯಿಂದ ಮಾತ್ರ ಹುಟ್ಟುತ್ತದೆ**... (ಸಂಗ್ರಹ : ಹೇಮಲತಾ ಶಿಕ್ಷಕರು ಜಿವಿಸಿಎಚ್‌ಎಸ್)**

# ಗುರುಬಸಮ್ಮ ವಿ. ಚಿಗಟೇರಿ ನರ್ಸರಿ ಮಕ್ಕಳ ಚಟುವಟಿಕೆಗಳ ಚಿತ್ರಪಟಗಳು
















**ಸರ್ವರಿಗೂ 80ನೇ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು**